ಸ್ವಾಮಿ ವಿವೇಕಾನಂದರ ಸಾನ್ನಿಧ್ಯಲಾಭ ಪಡೆದ ಭಾಗ್ಯವಂತ ಭಾರತೀಯ ನಾರಿಯರು

# ಪಂಡಿತಾ ಕ್ಷಮಾರಾವ್

**ಡಾ. ಶೈಲಜಾ ಆಮೂರ**

ಭವ್ಯಭಾರತದ ಆಧ್ಯಾತ್ಮಿಕ ಚೇತನವನ್ನು ಪ್ರಪಂಚದಾದ್ಯಂತ ಪಸರಿಸಿ, ಮಾನವನಿಗೆ ತನ್ನ ದಿವ್ಯತೆಯ ಸೃಷ್ಟಿ ಪರಿಕಲ್ಪನೆಯನ್ನು ಮಾಡಿಸಿದ ಮಹಾನ್ ಯೋಗಿ ಸ್ವಾಮಿ ವಿವೇಕಾನಂದರ ಸಾನ್ನಿಧ್ಯಲಾಭ ಪಡೆದ ಅನೇಕ ಜನ ಭಾರತದ ನಾರಿಯರಲ್ಲಿ ಪಂಡಿತಾ ಕ್ಷಮಾರಾವ್ ಕೂಡ ಒಬ್ಬರು. ಬಹುಭಾಷಾ ಪ್ರವೀಣೆಯಾಗಿದ್ದ ಕ್ಷಮಾರಾವ್ ಸಂಸ್ಕೃತ, ಇಂಗ್ಲಿಷ್ ಮತ್ತು ಮರಾಠಿ ಭಾಷೆಗಳಲ್ಲಿ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಅವರು ತಮ್ಮ ತಂದೆಯಾದ ಪಂಡಿತ ಶಂಕರ ಪಾಂಡುರಂಗ ಅವರ ಜೀವನಚರಿತ್ರೆಯನ್ನು 'ಶಂಕರ ಜೀವನ ಆಖ್ಯಾನಂ' ಎಂದು ಸಂಸ್ಕೃತದಲ್ಲಿ ಗ್ರಂಥ ಬರೆದ ಭಾರತದಿದ್ದಾರೆ. ಈ ಕೃತಿ ಕೇವಲ ಶಂಕರ ಪಾಂಡುರಂಗರ ಜೀವನವನ್ನಷ್ಟೇ ವಿವರಿಸದೆ ಅವರ ಕುಟುಂಬದವರೊಂದಿಗೆ ಸ್ವಾಮಿ ವಿವೇಕಾನಂದರ ಒಡನಾಟವನ್ನೂ ಅತ್ಯಂತ ಸುಂದರ ಸಂಸ್ಕೃತ ಶ್ಲೋಕಗಳಲ್ಲಿ ನಿರೂಪಿಸುತ್ತದೆ. ಪರಿವ್ರಾಜಕ ಸಂನ್ಯಾಸಿ ಸ್ವಾಮಿ ವಿವೇಕಾನಂದರು ಹೇಗೆ ಗುಜರಾತಿನ ಪೋರ್‌ಬಂದರನ್ನು ಪ್ರವೇಶಿಸಿದರು, ಅವರ ಜೀವನ ಕ್ರಮ ಹೇಗಿತ್ತು, ಏಕೆ ಅವರು ಹೆಚ್ಚಿನ ವೇಳೆಯನ್ನು ಗುಜರಾತಿನ ಪೋರ್‌ಬಂದರಿನಲ್ಲಿ ಕಳೆದರು ಹಾಗೂ ಅವರ ಅಧ್ಯಯನ, ಆಹಾರಗಳೇ ಮೊದಲಾದ ವಿವರಗಳನ್ನು ಓದುಗರು ಕ್ಷಮಾರಾವ್ ಅವರ ಮೇರುಕೃತಿಯಾದ 'ಶಂಕರ ಜೀವನ ಆಖ್ಯಾನಂ' ಗ್ರಂಥದಲ್ಲಿ ಕಾಣಬಹುದಾಗಿದೆ. ಸ್ವಾಮೀಜಿ ಅವರ ಮನೆಯಲ್ಲಿ ಆತಿಥ್ಯವನ್ನು ಸ್ವೀಕರಿಸುತ್ತಿದ್ದಾಗ ಇನ್ನೂ ಪುಟ್ಟ ಬಾಲೆಯಾಗಿದ್ದ ಕ್ಷಮಾಳ ಮನದ ಪುಟಗಳಲ್ಲಿ ಅವರ ನೆನಪು ಸದಾ ಹಸಿರಾಗಿಯೇ ಇತ್ತು.



ಪೋರಬಂದರಿನ ಭೋಜೇಶ್ವರ ಬಂಗಲೆಯಲ್ಲಿ ಸ್ವಾಮಿ ವಿವೇಕಾನಂದರು ತಂಗಿದ್ದ ವಿಷಯದ ಬಗ್ಗೆ ಕ್ಷಮಾ ರಾವ್ ತನ್ನ ಸಂಸ್ಕೃತ ಕಾವ್ಯದಲ್ಲಿ ಬರೆದ ಕೆಲವು ಶ್ಲೋಕಗಳ ಇಂಗ್ಲಿಷ್ ಅನುವಾದ ೨೦೦೬ರ ಫೆಬ್ರವರಿ ತಿಂಗಳ 'ವೇದಾಂತ ಕೇಸರಿ' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಸಂನ್ಯಾಸಿಯೊಬ್ಬರು ಅದನ್ನು ಅನುವಾದಿಸಿದ್ದಾರೆ. ಆ ಲೇಖನದ ಕನ್ನಡ ಅನುವಾದ ಹೀಗಿದೆ:

''ಪಂಡಿತ ಶಂಕರ ಪಾಂಡುರಂಗರ ಮನೆಗೆ ಬರುತ್ತಿದ್ದ ಎಷ್ಟೋ ಜನ ಅತಿಥಿಗಳಲ್ಲಿ ಮಹಾಯೋಗಿ ಸ್ವಾಮಿ ವಿವೇಕಾನಂದರೂ ಒಬ್ಬರಾಗಿದ್ದು ಅವರ ಸನ್ನಿಧಾನದಲ್ಲಿ ಇರುತ್ತಿದ್ದವರಿಗೆ ಏನೋ ಒಂದು ರೀತಿಯ ಪವಿತ್ರತೆಯ ಅನುಭವವಾಗಿ ಧನ್ಯತಾಭಾವ ಉಂಟಾಗುತ್ತಿತ್ತು. (**ಆಗತೇಷು ಸುವಿಖ್ಯಾತಸ್ತಸ್ಯಾಸೀದತಿಥಿರ್ಮಹಾನ್। ವಿವೇಕಾನಂದ-ಯೋಗೀಂದ್ರಃ ಸ್ವಾಮೀ ಸಂಸರ್ಗ ಪಾವನಃ**) ದ್ವಾರಕಾ ಪಟ್ಟಣದಿಂದ ನಾವೆಯಲ್ಲಿ ಕುಳಿತು ಬರುತ್ತಿದ್ದಾಗ ಈ ಸಂನ್ಯಾಸಿ ಭೋಜೇಶ್ವರ ಬಂಗಲೆಯನ್ನು ನೋಡಿ 'ಇದು ಯಾರ ಮನೆ?' ಎಂದು ಸಹಪ್ರಯಾಣಿಕರನ್ನು ಕೇಳಿದರು. ಆಗ ಸಹ ಪ್ರಯಾಣಿಕ, 'ಇದು ಪಂಡಿತ ಶಂಕರ ಪಾಂಡುರಂಗ ಎನ್ನುವ ಅತ್ಯಂತ ಪ್ರಸಿದ್ಧ ವ್ಯಕ್ತಿಯ ಮನೆ' ಎಂದ ತಿಳಿಸಿದರು.

''ಹೇಗೆ ಒಬ್ಬ ರತ್ನಗಳ ವ್ಯಾಪಾರಿ ಒಂದು ಉತ್ಕೃಷ್ಟವಾದ ರತ್ನದ ಬಗ್ಗೆ ಕೇಳುತ್ತಿದ್ದಂತೆ ಅದನ್ನು ನೋಡಲು ಇಚ್ಛಿಸುತ್ತಾನೋ ಹಾಗೆಯೇ ಶಂಕರ ಪಾಂಡುರಂಗರ ಪಾಂಡಿತ್ಯದ ಬಗ್ಗೆ ಕೇಳಿದ ಸ್ವಾಮಿ ವಿವೇಕಾನಂದರು ಅವರನ್ನು ನೋಡಲು ಇಚ್ಛಿಸಿದರು. ಜ್ಞಾನಿ ಹಾಗೂ ತಪಸ್ವಿಯಾಗಿದ್ದ ಸ್ವಾಮೀಜಿ ನಾವೆಯನ್ನು ಒಂದೆಡೆ ನಿಲ್ಲಿಸುವಂತೆ ವಿನಂತಿಸಿ ಮತ್ತೋರ್ವ ಸಹ ಪ್ರಯಾಣಿಕನೊಂದಿಗೆ ಹೊರಗೆ ಬಂದು ಭೋಜೇಶ್ವರ ಬಂಗಲೆಗೆ ಬಂದರು. ಅತಿಥಿ ಸತ್ಕಾರವನ್ನು ಅತ್ಯಂತ ಪ್ರೀತಿಯಿಂದ ನಿರ್ವಹಿಸುತ್ತಿದ್ದ ಶಂಕರ ಪಾಂಡುರಂಗರಿಗೆ ತಮ್ಮ ಮನೆಗೆ ಬಂದ ಸಂನ್ಯಾಸಿ ಸ್ವಾಮಿ ವಿವೇಕಾನಂದರು ಎಂದು ತಿಳಿದಾಗ, ಅವರನ್ನು ವಿಶೇಷವಾದ ಭಕ್ತಿ ಹಾಗೂ ಪ್ರೀತ್ಯಾದರಗಳಿಂದ ತಮ್ಮ ಮನೆಗೆ ಬರಮಾಡಿಕೊಂಡರು. ಸ್ನಾನ ಹಾಗೂ ಪೂಜೆ ಮುಗಿಸಿ, ಸ್ವಾಮೀಜಿ ಸ್ವಲ್ಪ ವಿಶ್ರಮಿಸಿದರು.

ಅವರ ವಿಶ್ರಾಂತಿಯ ತರುವಾಯ ಪಂಡಿತ ಶಂಕರರು ಅವರನ್ನು ಪ್ರಕಾಶಮಾನವಾದ ಭೋಜನಾಲಯಕ್ಕೆ ಕರೆದು ತಂದರು. ಅಲ್ಲಿ ಸಿಹಿತಿಂಡಿಗಳ ಪರಿಮಳ ಎಲ್ಲೆಡೆಗೂ ಹರಡಿತ್ತು. ಸ್ವಾಮಿ ಕೊಠಡಿಯನ್ನು ಪ್ರವೇಶಿಸುತ್ತಿದ್ದಂತೆ ಮಾಧವ ಮತ್ತು ವಾಮನ (ಶಂಕರ ಪಾಂಡುರಂಗರ ಗಂಡು ಮಕ್ಕಳು) ಇಬ್ಬರೂ ಕರಜೋಡಿಸಿ ನಮಸ್ಕರಿಸಿದರು. ಆದರೆ ತಾರಾ, ಕ್ಷಮಾ ಮತ್ತು ಭದ್ರಾ (ಪಂಡಿತ ಶಂಕರರ ಹೆಣ್ಣು ಮಕ್ಕಳು) ಮಾತ್ರ ಶಾಂತವಾಗಿ ನಿಂತುಕೊಂಡು ಸ್ವಾಮೀಜಿಯ ಭವ್ಯ ವ್ಯಕ್ತಿತ್ವವನ್ನು ತದೇಕಚಿತ್ತರಾಗಿ ವೀಕ್ಷಿಸುತ್ತಿದ್ದರು. ಒಂದೇ ಸಮನೆ ವಟವಟಗುಟ್ಟುತ್ತ, ತಮ್ಮ ತಮ್ಮಲ್ಲಿಯೇ ಮಾತನಾಡುತ್ತ ನಿಂತಿದ್ದ ಗಂಡು ಹುಡುಗರಿಗಿಂತ ಶಾಂತಚಿತ್ತರಾಗಿ ನಿಂತಿದ್ದ ಮೂವರು ಪುಟ್ಟ ಬಾಲಕಿಯರನ್ನು ಸ್ವಾಮೀಜಿ ವಿಶೇಷ ಆನಂದದಿಂದ ನೋಡುತ್ತಿದ್ದರು.

''ಭೋಜನದ ತರುವಾಯ ಶಂಕರ ಪಾಂಡುರಂಗರು ಅದ್ಭುತ ವ್ಯಕ್ತಿತ್ವದ ಸ್ವಾಮೀಜಿಯವರೊಂದಿಗೆ ಬೇರೆ ಬೇರೆ ವಿಷಯಗಳ ಬಗ್ಗೆ ಚರ್ಚಿಸಿದರು. ಮರುದಿನ ಅವರು ಸ್ವಾಮೀಜಿಯವರನ್ನು ಸಮುದ್ರತೀರಕ್ಕೆ ಕರೆದುಕೊಂಡು ಹೋದರು ಹಾಗೂ ಬೇರೆ ಬೇರೆ ಸುಂದರ ಸ್ಥಳಗಳಿಗೂ ಭೇಟಿ ನೀಡಿದರು. ಸ್ವಾಮೀಜಿಯವರು ಪಂಡಿತರು ಪ್ರಾರಂಭಿಸಿದ್ದ ಬೇರೆ ಬೇರೆ ಹೊಸ ಹೊಸ ಸಂಸ್ಥೆಗಳನ್ನು ಕಂಡು ಅವರ ಅಪಾರ ಬುದ್ಧಿವಂತಿಕೆಗೆ ಬೆರಗಾದರು.

''ಪಂಡಿತರು ಮತ್ತೆ ಸ್ವಾಮೀಜಿಯನ್ನು ಸಮುದ್ರತೀರಕ್ಕೆ ಕರೆದುಕೊಂಡು ಬಂದರು. ಅಲ್ಲಿ ಪಂಡಿತರ ಗಂಡು ಮಕ್ಕಳು ಒಬ್ಬ ತರಬೇತುದಾರನ ಸಹಾಯ ಪಡೆಯುತ್ತ ಈಜು ಕಲಿಯುತ್ತಿದ್ದರು. ಅವರ ಮೂರು ಜನ ಹೆಣ್ಣು ಮಕ್ಕಳು ಪರಿಚಾರಿಕೆಯೊಂದಿಗೆ ಆನಂದದಿಂದ ಆಟವಾಡುತ್ತಿದ್ದರು ಹಾಗೂ ಸಮುದ್ರ ದಡದಲ್ಲಿ ಉಸುಕಿನಿಂದ ಒಂದು ಚಿಕ್ಕ ಕೋಟೆಯನ್ನೂ ನಿರ್ಮಿಸಿದ್ದರು. ಮೂವರು ಹುಡುಗಿಯರು ಕೈ ಕೈ ಹಿಡಿದುಕೊಂಡು ಮಧುರವಾಗಿ ಹಾಡು ಹೇಳುತ್ತ ಉಸುಕಿನ ಕೋಟೆಯ ಸುತ್ತಲೂ ಓಡಾಡುತ್ತಿದ್ದರು, ನರ್ತಿಸತೊಡಗಿದರು. ಸ್ವಾಮೀಜಿ ಕೂಡ ಪುಟ್ಟ ಬಾಲಕನಂತೆ ಅವರೊಂದಿಗೆ ಸೇರಿ ಹಾಡುತ್ತ, ನರ್ತಿಸತೊಡಗಿದರು. ಪುಟ್ಟ ಸಹೋದರಿಯರೂ ಕೂಡ ಅತಿ ಆನಂದದಿಂದ ಹೊಸ ಯೋಗಿಯನ್ನು ತಮ್ಮ ಆಟದಲ್ಲಿ ಸೇರಿಸಿಕೊಂಡರು. ಸ್ವಲ್ಪ ಹೊತ್ತಿನ ತರುವಾಯ ಸ್ವಾಮೀಜಿ ಪಂಡಿತರ ಇಬ್ಬರೂ ಗಂಡು ಮಕ್ಕಳನ್ನು ತಮ್ಮ ಹೆಗಲ ಮೇಲೆ ಕೂರಿಸಿಕೊಂಡು ನಗುತ್ತ ನೀರಿಗಿಳಿದು ಈಜತೊಡಗಿದರು. ಎಲ್ಲ ಕಲೆಗಳಲ್ಲೂ ಪಾಂಡಿತ್ಯ ಪಡೆದಿದ್ದ ಸ್ವಾಮೀಜಿ ಇಬ್ಬರೂ ಹುಡುಗರಿಗೆ ಈಜುಗಾರಿಕೆಯ ಬಗೆಬಗೆಯ ವಿಧಾನಗಳನ್ನು ಕಲಿಸಿದರು.

''ಸಂಜೆಯ ವೇಳೆ ಶಂಕರ ಪಂಡಿತ ಹಾಗೂ ಸ್ವಾಮಿ ವಿವೇಕಾನಂದರು ಕುದುರೆಯ ಮೇಲೆ ಕುಳಿತು ದೂರದಲ್ಲಿರುವ ಹಳ್ಳಿಗಳಿಗೆ ಭೇಟಿ ನೀಡಿದರು.

''ಅಡುಗೆ ಮಾಡುವ ಕಲೆಯಲ್ಲಿಯೂ ನೈಪುಣ್ಯತೆ ಪಡೆದಿದ್ದ ಸ್ವಾಮೀಜಿ ಉಷಾದೇವಿ (ಕ್ಷಮಾರಾವ್‌ರವರ ತಾಯಿ)ಯವರಿಗೆ ಬಗೆ ಬಗೆಯ ಶಾಖಾಹಾರಿ ಪದಾರ್ಥಗಳನ್ನು ಹಾಗೂ ಧಾನ್ಯಗಳನ್ನು ಬಳಸಿ ಮಾಡುವ ವಿವಿಧ ರೀತಿಯ ತಿಂಡಿಗಳನ್ನು ತಯಾರಿಸುವುದನ್ನು ಕಲಿಸಿದರು.

''ಹೀಗೆ ನಾಲ್ಕು ತಿಂಗಳುಗಳ ಕಾಲ ಸ್ವಾಮೀಜಿ ಪೋರ್‌ಬಂದರ್‌ನಲ್ಲಿ ನೆಲೆಸಿ ನಮ್ಮ ಊರನ್ನು ಪಾವನಗೊಳಿಸಿದರು. ನಮ್ಮ ಆತಿಥ್ಯವನ್ನು ಸ್ವೀಕರಿಸಿ, ತರುವಾಯ ಸ್ವಾಮೀಜಿ ಪೋರ್‌ಬಂದರ್‌ನಿಂದ ದ್ವಾರಕಾದತ್ತ ಪ್ರಯಾಣ ಬೆಳಸಿದರು.''

ಇದಿಷ್ಟು ಕ್ಷಮಾರಾವ್ ಬರೆದ 'ಶಂಕರ ಜೀವನ ಆಖ್ಯಾನಮ್' ಎಂಬ ಸಂಸ್ಕೃತ ಗ್ರಂಥದಲ್ಲಿ 'ಪೋರ್‌ಬಂದರಿನ ಭೋಜೇಶ್ವರ ಬಂಗಲೆಯಲ್ಲಿ ಸ್ವಾಮಿ ವಿವೇಕಾನಂದರು' ಎನ್ನುವ ಶೀರ್ಷಿಕೆಯ ಕಿರು ಲೇಖನದ ವಿವರವಾಗಿದೆ.

ಪಂಡಿತಾ ಕ್ಷಮಾರಾವ್ ಜುಲೈ ತಿಂಗಳ ನಾಲ್ಕನೇ ತಾರೀಖು ೧೮೯೦ನೆಯ ಇಸವಿಯಲ್ಲಿ ಕೊಂಕಣ ಸಮಾಜಕ್ಕೆ ಸೇರಿದ ಕುಟುಂಬವೊಂದರಲ್ಲಿ ಪುಣೆಯಲ್ಲಿ ಜನಿಸಿದರು. ಶಂಕರ ಪಾಂಡುರಂಗ ಹಾಗೂ ಉಷಾದೇವಿಯವರ ಪುತ್ರಿಯಾಗಿ ಜನಿಸಿದ್ದ ಕ್ಷಮಾ ಮೊದಲಿನಿಂದಲೂ ಸಂಸ್ಕೃತ, ಇಂಗ್ಲೀಷ್ ಹಾಗೂ ಮರಾಠಿ ಭಾಷೆಗಳಲ್ಲಿ ಆಸಕ್ತಿ ಹೊಂದಿದ್ದವಳಾಗಿದ್ದಳು. ಈ ಭಾಷೆಗಳಲ್ಲಿ ಎಷ್ಟೋ ಪುಸ್ತಕಗಳನ್ನು ಸಹ ಬರೆದಿದ್ದಾರೆ.

ರಾಘವೇಂದ್ರರಾವ್ ಎನ್ನುವ ಮುಂಬಯಿಯ ಒಬ್ಬ ಖ್ಯಾತ ವೈದ್ಯರೊಂದಿಗೆ ಕ್ಷಮಾರ ಮದುವೆಯಾಗಿ, ಕ್ಷಮಾರಾವ್ ಎಂದು ಹೆಸರು ಬದಲಾಯಿತು. ಪ್ರಗತಿಪರ ಚಿಂತಕ ಹಾಗೂ ಬುದ್ಧಿಶಾಲಿಯಾಗಿದ್ದ ರಾಘವೇಂದ್ರರಾವ್ ಕ್ಷಮಾರಿಗೆ ಮನೆಯಲ್ಲಿಯೇ ಒಬ್ಬ ಶಾಸ್ತ್ರಿಗಳನ್ನು ನೇಮಿಸಿ ಅವರ ಸಂಸ್ಕೃತ, ಮರಾಠಿ ಶಿಕ್ಷಣ ಮುಂದುವರಿಯುವ ವ್ಯವಸ್ಥೆ ಮಾಡಿದರು. ಮೇಲಿಂದ ಮೇಲೆ ಯೂರೋಪ್ ರಾಷ್ಟ್ರಗಳಿಗೆ ಭೇಟಿ ಕೊಡುತ್ತಿದ್ದ ಅವರು ಎಲ್ಲ ಕಡೆಗೂ ತಮ್ಮ ಪತ್ನಿ ಕ್ಷಮಾಳನ್ನು ತಮ್ಮೊಂದಿಗೆ ಕರೆದುಕೊಂಡು ಹೋಗುತ್ತಿದ್ದರು. ಪತಿಯ ಈ ಪ್ರೇರಣೆ ಹಾಗೂ ಸಹಕಾರಗಳೊಂದಿಗೆ ಕ್ಷಮಾಳಿಗೆ ಹೊರದೇಶದ ಸಾಹಿತಿಗಳನ್ನೂ ಭೇಟಿ ಮಾಡುವ ಅವಕಾಶ ದೊರೆಯಿತು. ಫ್ರೆಂಚ್ ಭಾಷೆಯನ್ನು ಚೆನ್ನಾಗಿ ಕಲಿತು ಅದರಲ್ಲಿಯೂ ಲೇಖನ ಬರೆದ ಕೀರ್ತಿ ಕ್ಷಮಾರಾವ್‌ಗೆ ಸಲ್ಲುತ್ತದೆ. ಇಟಾಲಿಯನ್ ಭಾಷೆಯನ್ನು ಆಮೂಲಾಗ್ರವಾಗಿ ಅಭ್ಯಸಿಸಿದ ಕ್ಷಮಾ ಗುಜರಾತಿ ಭಾಷೆಯಲ್ಲಿಯೂ ಪ್ರಭುತ್ವ ಸಾಧಿಸಿದ್ದರು. ೧೯೩೦ನೆ ಇಸವಿಯ ನಂತರ ಅವರು ಕೇವಲ ಸಂಸ್ಕೃತ ಭಾಷೆಯಲ್ಲಿ ತಮ್ಮ ಸಾಹಿತ್ಯ ರಚನೆ ಪ್ರಾರಂಭಿಸಿದರು. ಅದಕ್ಕಾಗಿ ಅವರಿಗೆ ಸಂದ ಗೌರವ 'ಪಂಡಿತಾ' ಎಂಬ ಬಿರುದು.

ಭಾರತದಲ್ಲಿ ಟೆನಿಸ್ ಆಟದಲ್ಲಿ ಭಾಗವಹಿಸುತ್ತಿದ್ದ ಮೊದಲ ಭಾರತದ ಮಹಿಳೆ ಕ್ಷಮಾರಾವ್ ಎಂಬ ಕೀರ್ತಿಯೂ ಅವರಿಗೆ

ಸಲ್ಲುತ್ತದೆ. ೧೯೨೭ರಲ್ಲಿ ಮುಂಬಯಿಯಲ್ಲಿ ನಡೆದ ಟೆನಿಸ್ ಆಟದಲ್ಲಿ ಸಿಂಗಲ್ಸ್ ಚಾಂಪಿಯನ್‌ಶಿಪ್ ಕೂಡ ಪಡೆದರು.

ತಮ್ಮ ಸಂಸ್ಕೃತ ಭಾಷೆಯ ಮೇಲಿನ ಪ್ರೀತಿಯನ್ನು ಹಾಗೂ ಟೆನ್ನಿಸ್ ಆಟದ ಹವ್ಯಾಸವನ್ನು ತಮ್ಮ ಮಗಳು ಲೀಲಾ ರೋ ದಯಾಲ್‌ಗೆ ಕೂಡ ವರ್ಗಾಯಿಸಿದರು. ೧೯೩೪ನೆಯ ಇಸವಿಯಲ್ಲಿ ನಡೆದ ವಿಂಬಲ್ಡನ್ ಆಟದಲ್ಲಿ ಗೆಲುವು ಸಾಧಿಸಿದ ಹಿರಿಮೆ ಲೀಲಾ ದಯಾಳ್‌ರದ್ದು.

ಪಂಡಿತ ಕ್ಷಮಾರಾವ್ ೧೯೫೩ನೆಯ ಇಸವಿಯಲ್ಲಿ ಇಹ ಲೋಕ ಯಾತ್ರೆ ಮುಗಿಸಿದರು.

೧೯೫೫ನೆಯ ಇಸವಿಯ ಮೇ ತಿಂಗಳ ಆರನೆಯ ತಾರೀಖಿನ 'ದ ಸಂಡೇ ಸ್ಟ್ಯಾಂಡರ್ಡ್ ನ್ಯೂಸ್‌ಪೇಪರ್'ನಲ್ಲಿ, ''ಸಂಸ್ಕೃತ ಸಾಹಿತ್ಯದ ಇತಿಹಾಸದಲ್ಲಿ ಹಿಂದೆಂದೂ ಒಬ್ಬ ಮಹಿಳೆ ಇಷ್ಟು ಶ್ರೇಷ್ಠವಾದ ಕೃತಿಗಳನ್ನು ಬರೆದಿರಲಿಲ್ಲ. ಕ್ಷಮಾ ರಾವ್ ಒಂಬತ್ತು ಮಹಾಕಾವ್ಯಗಳನ್ನೂ, ಸುದೀರ್ಘವಾದ ಸಂಪೂರ್ಣ ನಾಟಕಗಳನ್ನೂ, ಹಲವಾರು ಕಿರುನಾಟಕಗಳನ್ನೂ ಮೂವತ್ತೈದು ಸಣ್ಣಕಥೆಗಳನ್ನೂ ಸಂಸ್ಕೃತ ಭಾಷೆಯಲ್ಲಿ ಬರೆದಿದ್ದಾರೆ. ೧೯೫೩ನೇ ಇಸವಿಯಲ್ಲಿ ತಮ್ಮ ತಂದೆಯವರಾಗಿದ್ದ ಪಂಡಿತ ಶಂಕರ ಪಾಂಡುರಂಗರ ಜೀವನ ಚರಿತ್ರೆಯನ್ನೂ ಕೂಡ ಸಂಸ್ಕೃತ ಭಾಷೆಯಲ್ಲಿಯೇ 'ಶಂಕರ ಜೀವನ ಆಖ್ಯಾನಂ' ಎಂಬ ಶೀರ್ಷಿಕೆಯ ಅಡಿಯಲ್ಲಿ ರಚಿಸಿದ್ದ ಗ್ರಂಥಕ್ಕೆ 'ಸಾಹಿತ್ಯ ಚಂದ್ರಿಕಾ' ಎಂಬ ಬಿರುದು ಕೂಡ ಲಭಿಸಿದೆ'' ಎಂದು ವಿವರವಾದ ಲೇಖನವನ್ನು ಮುದ್ರಿಸಲಾಗಿತ್ತು.

ಸ್ವಾಮಿ ವಿವೇಕಾನಂದರ ಪಾದಸ್ಪರ್ಶದಿಂದ ಪುನೀತವಾದ ಈ ಭೋಜೇಶ್ವರ ಬಂಗಲೆಯಲ್ಲಿ ೧೯೭೬ನೆ ಇಸವಿ, ಜನವರಿ ೧೨ ರಂದು ಶ್ರೀರಾಮಕೃಷ್ಣ ಮಠ Ramakrishna Mission Vivekananda Memorial, Porabandar (ವಿವೇಕಾನಂದ ಸ್ಮಾರಕ ರಾಮಕೃಷ್ಣ ಮಠ) ಪ್ರಾರಂಭವಾಯಿತು. ೧೯೯೮ನೆಯ ಇಸವಿ ಜನವರಿ ಹನ್ನೆರಡರಂದು ಸ್ವಾಮಿ ವಿವೇಕಾನಂದರ ಒಂಬತ್ತೂವರೆ ಅಡಿ ಎತ್ತರದ ಹಿತ್ತಾಳೆಯ ಮೂರ್ತಿಯನ್ನು ಭೋಜೇಶ್ವರ ಬಂಗಲೆಯಲ್ಲಿ ಸ್ವಾಮಿ ಶ್ರೀಧರಾನಂದಜಿ ಮಹಾರಾಜ್ ಅವರು ಪ್ರತಿಷ್ಠಾಪಿಸಿದರು. ಕ್ರಮೇಣ ಶ್ರೀರಾಮಕೃಷ್ಣ ಸಂಸ್ಕಾರಧಾಮ, ವಿವೇಕಾನಂದ ಸಂಸ್ಕಾರಧಾಮ ಎಂಬ ಹೆಸರಿನ ಹಲವಾರು ಕಟ್ಟಡಗಳನ್ನು ನಿರ್ಮಿಸಲಾಯಿತು.

ಪೋರಬಂದರಿನ ಶ್ರೀರಾಮಕೃಷ್ಣ ಆಶ್ರಮ ಇಂದಿಗೂ ಹತ್ತು ಹಲವಾರು ಸಾಮಾಜಿಕ, ಆಧ್ಯಾತ್ಮಿಕ, ಶೈಕ್ಷಣಿಕ, ಆರೋಗ್ಯದಾಯಕ ಚಟುವಟಿಕೆಗಳಲ್ಲಿ ಸದಾ ನಿರತವಾಗಿ ಸ್ವಾಮಿ ವಿವೇಕಾನಂದರ 'ಯಾರು ಇತರರಿಗಾಗಿ ಬದುಕುತ್ತಾರೋ ಅವರೇ ಬದುಕುತ್ತಾರೆ, ಉಳಿದವರೆಲ್ಲ ಬದುಕಿದ್ದರೂ ಸತ್ತಂತೆ' ಎಂಬ ಮಾತನ್ನು ಅಕ್ಷರಶಃ ಪಾಲಿಸುತ್ತ ಕಾರ್ಯ ನಿರ್ವಹಿಸುತ್ತಿದೆ. ❋

## ಮಂತ್ರದೀಕ್ಷೆಯ ಮಹಿಮೆ

ಕೆಲವು ಮಂದಿ ಭಕ್ತರು ದೀಕ್ಷೆ ಸ್ವೀಕರಿಸುತ್ತಲೇ ಗಾಢ ಧ್ಯಾನಸ್ಥರಾಗುತ್ತಿದ್ದರು ಅಥವಾ ಪ್ರೇಮಾಶ್ರು ಸುರಿಸುತ್ತಿದ್ದರು. ಒಮ್ಮೆ ಸಿಂಧ್ ಪ್ರಾಂತ್ಯದಿಂದ ಒಬ್ಬ ಭಕ್ತ ದೀಕ್ಷೆಗಾಗಿ ಬಂದಿದ್ದನು. ಅವನನ್ನು ಮಹಾಪುರುಷಜಿ (ಸ್ವಾಮಿ ಶಿವಾನಂದರು, ಶ್ರೀರಾಮಕೃಷ್ಣರ ನೇರ ಶಿಷ್ಯಂದಿರಲ್ಲಿ ಒಬ್ಬರು) ಹತ್ತಿರ ಕರೆದುಕೊಂಡು ಹೋಗುತ್ತಲೇ ಅವರು ಅವನನ್ನು ಪರಿಚಿತನೆಂಬಂತೆ ಮಾತನಾಡಿಸಿದರು. ಅವನು ಮಹಾಪುರುಷಜಿಯವರ ಪಾದಗಳನ್ನು ಹಿಡಿದುಕೊಂಡು, ಪುಲಕಿತ ಶರೀರದಿಂದ, ''ದಯವಿಟ್ಟು ನನ್ನ ಮೇಲೆ ಕೃಪೆ ಮಾಡಿ, ನನಗೆ ಭಗವಂತನ ಹತ್ತಿರ ಹೋಗಲು ಮಾರ್ಗ ತೋರಿಸಿ'' ಎಂದು ಪ್ರಾರ್ಥಿಸಿದನು. ಮಹಾಪುರುಷಜಿಯವರ ಮನ ಕರಗಿತು. ಅವರು ತಮ್ಮ ಶ್ರೀಹಸ್ತವನ್ನು ಶಿಷ್ಯನ ತಲೆಯ ಮೇಲಿರಿಸಿ, ಭಾವಾವಸ್ಥೆಗೇರಿ, ''ಮಗು, ಶ್ರೀರಾಮಕೃಷ್ಣರು ನಿನ್ನ ಮೇಲೆ ಕೃಪೆ ಮಾಡಿದ್ದಾರೆ. ನಿನ್ನನ್ನು ನಾನು ಅವರ ಪಾದಗಳಲ್ಲಿ ಅರ್ಪಿಸುತ್ತೇನೆ'' ಎಂದರು.

ಬಳಿಕ ಅವರು ಅವನಿಗೆ ಗರ್ಭಗೃಹದಲ್ಲಿ ಮಂತ್ರದೀಕ್ಷೆ ನೀಡಿದರು. ಅಂದು ಬೇರೆ ದೀಕ್ಷಾರ್ಥಿಯಿರಲಿಲ್ಲ. ಅವನು ಮಂತ್ರ ಸ್ವೀಕರಿಸುತ್ತಲೇ ಪ್ರೇಮಾಶ್ರು ಸುರಿಸುತ್ತ ಗಾಢ ಧ್ಯಾನಸ್ಥನಾದನು. ಸ್ವಲ್ಪ ಹೊತ್ತಿನ ಬಳಿಕ ಮಹಾಪುರುಷಜಿ ಅವನನ್ನು ತಮ್ಮ ಕೋಣೆಗೆ ಕರೆದುಕೊಂಡು ಬಂದು, ಶ್ರೀರಾಮಕೃಷ್ಣರ ಪ್ರಸಾದ ಕೊಟ್ಟರು. ಧ್ಯಾನಭಾವದಲ್ಲಿದ್ದ ಅವನು ಕೋಣೆಗೆ ಬಂದು ಮತ್ತೆ ಧ್ಯಾನಸ್ಥನಾದನು. ಮಹಾಪುರುಷಜೀಯವರೂ ಚಪ್ಪಾಳೆ ತಟ್ಟುತ್ತ, ಭಾವಾವಿಷ್ಟರಾಗಿ, ಈ ಭಜನೆ ಹಾಡಿದರು: 'ನಿಜಗುರುವಿನ ಅನುಗ್ರಹವಾಗಲು ನಿತ್ಯಾನಿತ್ಯ ವಿವೇಕ, ನಿಜಜ್ಞಾನ ಲಭ್ಯ! ಇದ್ದಿಲು ಬೆಂಕಿಯ ಸ್ಪರ್ಶದಿಂದ ಬೆಂಕಿಯೆ ಆಗುವಂತೆ।' ಅವರ ನೇತ್ರಗಳು ಅರೆತೆರೆದಿದ್ದವು. ಅವರು ಈ ಎರಡು ಸಾಲುಗಳನ್ನೇ ಪುನರುಚ್ಚರಿಸುತ್ತ ಇಡೀ ಕೋಣೆಯಲ್ಲಿ ಸುತ್ತುಹಾಕಿದರು.

ಅವನು ಅರ್ಧಗಂಟೆಯ ಅನಂತರ ಸಹಜ ಸ್ಥಿತಿಗೆ ಮರಳಿದನು. ಮಹಾಪುರುಷಜಿ ಅವನನ್ನು ತಮ್ಮ ಹತ್ತಿರ ಕುಳ್ಳಿರಿಸಿಕೊಂಡು ವಾತ್ಸಲ್ಯದಿಂದ ಸಾಧನೆಗೆ ಸಂಬಂಧಿಸಿದಂತೆ ಸೂಚನೆಗಳನ್ನಿತ್ತರು. ಅವರ ಬೋಧನೆಯ ಸಾರ, ಶರಣಾಗತಿ. ಭಕ್ತ ಶ್ರೀರಾಮಕೃಷ್ಣರ ಪಾದಗಳಲ್ಲಿ ಪೂರ್ಣ ಶರಣಾಗತನಾದರೆ ಎಲ್ಲ ಚಿಂತೆಗಳಿಂದ ಮುಕ್ತನಾಗುತ್ತಾನೆ. ಆ ಭಕ್ತ ಪ್ರಸಾದ ಸ್ವೀಕರಿಸಿ ಕಲ್ಕತ್ತೆಗೆ ಮರಳಿದನು.

*'ದಿವ್ಯಾತ್ಮರೊಡನೆ' ಗ್ರಂಥದಿಂದ, ಪು.೧೩೨, ಮೈಸೂರು ಆಶ್ರಮದ ಪ್ರಕಟಣೆ*